PW_13

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

ಸಿ.ಸಿ.2350/2021

ಸಾಕ್ಷಿದಾರರ ಹೆಸರು	-	ಎಸ್ ರೋಶನ್ ಜಮೀರ್	PW:13
ತಂದೆ ಹೆಸರು	-	ಲೇಟ್ ಖಾಸಿಂ ಪೀರಾ	CW:38
ವಯಸ್ಸು	-	56 ವರ್ಷ	ಪ್ರಮಾಣ ವಚನ ಬೋದಿಸಿದ
ಉದ್ಯೋಗ	-	ಡಿ ವೈ ಎಸ್ ಪಿ, ಜಮಖಂಡಿ ಉಪವಿಬಾಗ	ದಿ: 30/07/2026
ವಾಸ	-	ಜಮಖಂಡಿ	

ಸಾಕ್ಷಿ ವಿಸಿ ಮುಖೇನ ಹಾಜರಿದ್ದು ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

1. ಡಿ ಸಿ ಐ ಬಿ ವಿಬಾಗ ಚಿತ್ರದುರ್ಗ ಇಲ್ಲಿ ನಾನು ಪೊಲೀಸ್ ನಿರೀಕ್ಷಕರಾಗಿ ಅಕ್ಟೊಬರ್ 2013 ರಿಂದ ಮಾರ್ಚ್ 2015 ರವರೆಗೆ ಕಾರ್ಯನಿರ್ವಹಿಸುತಿದ್ದೆ.

2. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 10.11.2013 ರಂದು ಈ ಪ್ರಕರಣದ ಕಡತವನ್ನು ಚಾಸಾ.37 ರವರಿಂದ ಪಡೆದು ಪರಿಶೀಲಿಸಿ ತನಿಖೆ ಪೂರ್ಣ ಗೊಳಿಸಿದ್ದು ತನಿಖೆ ಸರಿಯಿದ್ದ ಕಾರಣ ಪರಿಶೀಲಿಸಿ ಆರೋಪಿಗಳ ವಿರುದ್ದ ಅಂತಿಮ ವರದಿ ಸಲ್ಲಿಸಿದ್ದೆ.

ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎ ಜಿ ಎಸ್ ವಕೀಲರಿಂದಃ

3. ಬ್ಯಾಂಕ್ ಪ್ರಾಡ್ ಕೇಸ್ ಗೆ ಸಂಬಂದಿಸಿದಂತೆ ಇದೇ ಪ್ರಥಮ ಬಾರಿಗೆ ಅಂತಿಮ ವರದಿ ಸಲ್ಲಿಸಿರುವುದು ಎಂದರೆ ಸರಿ. ಅಂತಿಮ ವರದಿ ಆರೋಪಿಗಳ ವಿರುದ್ದ ಸಲ್ಲಿಸುವ ಕಾಲಕ್ಕೆ ಚಾಸಾ.37 ಕಡತದಲ್ಲಿ ಅಳವಡಿಸಿದ್ದ ಎಲ್ಲ ದಾಖ್ಲೆಗಳನ್ನು ಪರಿಶೀಲಿಸಿ ಸಲ್ಲಿಸಿದ್ದೆ. ಜ್ಯುಯಲ್ ವೆರಿಪೈ ಪಾರ್ಮ ಚಾಸಾ.37 ಪರಿಶೀಲಿಸಿದ್ದು ಕಡತದಲ್ಲಿದ್ದು

ನಾನು ಪರಿಶೀಲಿಸಿ ಅಂತಿಮ ವರದಿ ಸಲ್ಲಿಸಿದ್ದೆ. ಎಪ್ ಎಸ್ ಎಲ್ ವರದಿ ಸಂಪೂರ್ಣ ಪರಿಶೀಲಿಸಿ ಆ ಬಗ್ಗೆ ಚಾಸಾ.37 ಸಹ ಪರಿಶೀಲಿಸಿದ್ದು ಪರಿಶೀಲನೆ ಮಾಡಿದ ನಂತರವೇ ಅಂತಿಮ ವರದಿ ಸಲ್ಲಿಸಿದ್ದೆ. ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಯಾವ ಯಾವ ಬಂಗಾರದ ಖಾತೆಗಳಿಗೆ ಸಂಬಂದಿಸಿದಂತೆ ನಮೂನೆ ಸಲ್ಲಿಸಿದ್ದು ಕಡತದಲ್ಲಿ ಅಳವಡಿಸಿಕೊಂಡಿದ್ದರೂ ಅವುಗಳನ್ನೆಲ್ಲ ಪರಿಶೀಲಿಸಿ ಅಂತಿಮ ವರದಿ ಸಲ್ಲಿಸಿದ್ದೇನೆ. ಸದರಿ ಎಲ್ಲ ನಮೂನೆಗಳನ್ನು ನ್ಯಾಯಾಲಯಕ್ಕೆ ಅಂತಿಮ ವರದಿ ಒಟ್ಟಿಗೆ ಸಲ್ಲಿಸಲಾಗಿದೆ.

4. ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಎಪ್ ಎಸ್ ಎಲ್ ವರದಿ ನಾನು ಪರಿಶೀಲಿಸಿದ್ದು ಸದರಿ ವರದಿಯನ್ನೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಬ್ಯಾಂಕ್ ಗೆ ಎಷ್ಟು ಮೊತ್ತದ ಹಣಕ್ಕೆ ವಂಚಿಸಲಾಗಿದೆ ಎದಂರೆ ರೂ.1,58,74,571/- ರೂಗಳಿಗೆ ಸಂಬಂದಿಸಿದಂತೆ ವಂಚಿಸಿದ್ದಾರೆ. ಸದರಿ ರೂ.1,58,74,571/- ಮೊತ್ತವನ್ನು ವಂಚಿಸಿದ್ದಾರೆ ಎಂಬ ಖಾತೆಗೆ ಸಂಬಂದಿಸಿದಂತೆ ಬೇರ್ಪಡಿಸಿದಲ್ಲಿ ಒಟ್ಟು ಮೊತ್ತ ಅಷ್ಟೆ ಬರುತ್ತದೆಯಾ ಎಂದರೆ ಹೌದು. ಸಾಕ್ಷಿ ಮುಂದುವರೆದ ಈ ಪ್ರಕರಣದಲ್ಲಿ 6 ನೇ ಆರೋಪಿ ರೂ.39,683/- ರೂಗಳನ್ನು ಸುಳ್ಳು ಪ್ರಮಾಣಪತ್ರ ಬ್ಯಾಂಕ್ ಗೆ ನೀಡಿ ಕಮಿಶನ್ ಹಣವಾಗಿ ಸ್ವೀಕರಿಸಿದ್ದು , 7 ನೇ ಆರೋಪಿ ರೂ.1,44,467/- ರೂಗಳನ್ನು ಸುಳ್ಳು ಪ್ರಮಾಣಪತ್ರ ಬ್ಯಾಂಕ್ ಗೆ ನೀಡಿ ಕಮಿಶನ್ ಹಣವಾಗಿ ಸ್ವೀಕರಿಸಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ.

5. ರೂ.1,58,74,571/- ಮೊತ್ತ ಖಾತೆಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ಪ್ರತಿ ಖಾತೆ ಮೊತ್ತವನ್ನು ಪರಿಶೀಲಿಸಿದರೆ ಒಟ್ಟು ರೂ.1,58,74,571/- ಹಣ ಬರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ಖಾತೆಗಳಿಗೆ ಸಂಬಂದಿಸಿದಂತ ಬ್ಯಾಂಕ್ ಗೆ ವಂಚಿಸಿದ ಹಣ ರೂ.1,58,74,571/- ಅಲ್ಲ 2 ಕೋಟಿ ಮೇಲ್ಪಟ್ಟು ಎಂದರೆ ಸರಿಯಲ್ಲ. ಸೀರಿಯಲ್ ನಂ.22 ಮತ್ತು 27 ಬಂಗಾರದ ಖಾತೆಗಳಿಗೆ ಸಂಬಂದಿಸಿದಂತೆ ಸದರಿ ಖಾತೆಗಳ ಮೂಲ ನಮೂನೆಗಳನ್ನು ನಾನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಪರಿಶೀಲಿಸಿರಲಿಲ್ಲ ಎಂದರೆ ಸರಿಯಲ್ಲ.

6. ಸೀರಿಯಲ್ ನಂ.22 ಮತ್ತು 27 ಬಂಗಾರದ ಖಾತೆಗಳಿಗೆ ಸಂಬಂದಿಸಿದ ಮೂಲ ಖಾತೆ ನಮೂನೆಗಳನ್ನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸೀರಿಯಲ್ ನಂ.21 ರಿಂದ 34 ಬಂಗಾರದ ಖಾತೆಗಳಿಗೆ ಸಂಬಂದಿಸಿದ ನಮೂನೆ ಅರ್ಜಿಗಳನ್ನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸೀರಿಯಲ್ ನಂ.21 ರಿಂದ 29, 31 ರಿಂದ 34 ಖಾತೆಗಳಿಗೆ ಸಂಬಂದಿಸಿದ ಯಾವುದೇ ನಮೂನೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

7. 1 ನೇ ಆರೋಪಿಗೆ ಸಂಬಂದಿಸಿದ ಎಷ್ಟು ಸಹಿಗಳು ಎಫ್ ಎಸ್ ಎಲ್ ವರದಿಯಲ್ಲಿ ಅಡಕವಾಗಿವೆ ಆ ಬಗ್ಗೆ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಪರಿಶೀಲಿಸಿದ್ದೀರಾ ಎಷ್ಟು ಸಹಿಗಳು ಇವೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಅಂತಿಮ ವರದಿ ಪುಟ 12 ರಲ್ಲಿ ಕಾಣಿಸಿರುವ ಬಂಗಾರದ ಖಾತೆ ಸೀರಿಯಲ್ ನಂ.5 ಖಾತಾ ನಂ.142405000646 ಸದರಿ ಖಾತೆಗೆ ಸಂಬಂದಿಸಿದಂತೆ ಸಹಿ ಶಿವ ಎಂಬ ಹೆಸರಿನಡಿ ಸಹಿ ಪೊರ್ಜರಿಯಾಗಿ ಮಾಡಿರುತ್ತಾರೆ. ಸದರಿ ಪುಟದಲ್ಲಿ ಅತರೈಜ್ ಸಿಗ್ನೆಟರಿಯಾಗಿ ಕ್ಯೂ ಡಿ 23235 ರಂತೆ ಯಾರು ಸಹಿ ಮಾಡಿರುತ್ತಾರೆ ಎಂದರೆ ಆರೋಪಿ ಪ್ರದೀಪ್ ಕುಮಾರ್ ಎಂದು ನುಡಿಯುತ್ತಾರೆ.

8. ಅಂತಿಮ ವರದಿಯ ಪುಟ ಸಂಖ್ಯೆ 17 ಸೀರಿಯಲ್ ನಂ.26, ಖಾತೆ ನಂ.142405000749 ಕ್ಕೆ ಸಂಬಂದಿಸಿದಂತೆ ಸಹಿ ಯಾರು ಪೊರ್ಜರಿ ಮಾಡಿ ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನೀಲಪ್ಪ ಎಂಬುವವರ ಸಹಿ 1 ನೇ ಆರೋಪಿ ನವೀನ್ ಕುಮಾರ್ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಕ್ಯೂಡಿ 132 ರಂತೆ ಎಫ್ ಎಸ್ ಎಲ್ ವರದಿಯಲ್ಲಿ ಪುಟ ಸಂಖ್ಯೆ 17 ರ ಸೀರಿಯಲ್ ನಂ.26 ಸಹಿ 1 ನೇ ಆರೋಪಿ ನವೀನ್ ಕುಮಾರ್ ಪೊರ್ಜರಿ ಮಾಡಿದ್ದಾರೆ ಎಂಬ ಬಗ್ಗೆ ಕಾಣಿಸಿಲ್ಲ ಎಂದರೆ ಸರಿಯಲ್ಲ.

9. ಎಫ್ ಎಸ್ ಎಲ್ ವರದಿಯನ್ನು ನಾನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಪರಿಶೀಲನೆ ಮಾಡೇಇಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ ಯಾವುದೇ ಲೋಪದೋಷಗಳು ಉಂಟಾದಲ್ಲಿ ಎಲ್ಲ ತನಿಖಾದಿಕಾರಿಗಳು ಜವಾಬ್ದಾರಿ ಎಂದರೆ ಇರಬಹುದು. ನನ್ನ ಅಂತಿಮ ವರದಿಯಲ್ಲಿ 1 ನೇ ಆರೋಪಿ ಟೆಲ್ಲರ್ ಮತ್ತು ಕ್ಯಾಶಿಯರ್ ಅಗಿ ಜವಾಬ್ದಾರಿಯುತನಾಗಿ ಇದ್ದ ಎಂದು ಕಾಣಿಸಿದ್ದು ಆ ರೀತಿ ಯಾವ ಆದಾರದ ಮೇಲೆ ಕಾಣಿಸಿದ್ದೀರಿ ಎಂದರೆ ಸಂಬಂದಪಟ್ಟ ಗುರುತಿನ ಚೀಟಿ , ಫೋಟೋ ಮತ್ತು ವಾಸದ ವಿಳಾಸ ದೃಡೀಕೃತ , ಬ್ಯಾಂಕ್ ನ ಅಕ್ಕಸಾಲಿಗನ ಹೇಳಿಕೆ ಆದಾರದ ಮೇಲೆ ಅಂತಿಮ ವರದಿಯಲ್ಲಿ 1 ನೇ ಆರೋಪಿ ಬಗ್ಗೆ ಕಾಣಿಸಿದ್ದೇನೆ.

10. 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಟೆಲ್ಲರ್ ಮತ್ತು ಕ್ಯಾಶಿಯರ್ ಆಗಿ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಟೆಲ್ಲರ್ ಮತ್ತು ಕ್ಯಾಶಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು ಎಂಬ ಬಗ್ಗೆ ದಾಖಲೆ ಇದ್ದು ದಾಖಲೆ ಎಂದರೆ 1 ನೇ ಆರೋಪಿ ನೇಮಕಗೊಂಡ ಬಗ್ಗೆ ದಾಖಲೆ ಮತ್ತು ಆಡಿಟ್ ರಿಪೋರ್ಟ ಇದೆ. ಸದರಿ ದಾಖಲೆಗಳನ್ನು ಅಂತಿಮ ವರದಿ ಜೊತೆ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. 1 ನೇ ಆರೋಪಿ ಚಿತ್ರದುರ್ಗ ಶಾಖೆಯಲ್ಲಿ ಟೆಲ್ಲರ್ ಮತ್ತು ಕ್ಯಾಶಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು ಎಂಬ ಬಗ್ಗೆ ಅಂತಿಮ ವರದಿಯಲ್ಲಿ ಕಾಣಿಸಿರುವಂತೆ ಯಾವುದೇ ದಾಖಲೆ ಇಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

11. 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಯಾವ ದಿನಾಂಕ ತಿಂಗಳು ವರ್ಷದಲ್ಲಿ ಕಾರ್ಯನಿರ್ವಹಿಸಿದ್ದಾರೆ ನನಗೆ ನೆನಪಿಲ್ಲ. 24.05.2010 ರಂದು 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಗೆ ಹಿರಿಯ ವ್ಯವಸ್ತಾಪಕನಾಗಿ ನೇಮಕಗೊಂಡಿದ್ದು ಎಂದು ಅಂತಿಮ ವರದಿಯಲ್ಲಿ ತಪ್ಪಾಗಿ ಕಾಣಿಸಿದ್ದೇನೆ ಎಂದರೆ ನೆನಪಿಲ್ಲ. ದಿ:08.10.2011 ರಂದು 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಗೆ ಹಿರಿಯ ವ್ಯವಸ್ತಾಪಕನಾಗಿ ನೇಮಕಗೊಂಡಿದ್ದು ಎಂದರೆ ಸಾಕ್ಷಿ

24.05.2010 ರ ಕಾಲಕ್ಕೆ 1 ನೇ ಆರೋಪಿಯ ಪದನಾಮ ಬೇರೆ ಇರಬಹುದು ಆದರೆ ಅಂತಿಮ ವರದಿಯಲ್ಲಿ ಕಾಣಿಸಿರುವಂತೆ ದಿ:30.09.2010 ರಂದು 1 ನೇ ಆರೋಪಿ ಹಿರಿಯ ವ್ಯವಸ್ತಾಪಕನಾಗಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ನೇಮಕಗೊಂಡಿದ್ದು ಎಂದು ನುಡಿಯುತ್ತಾರೆ.

12. ಅಂತಿಮ ವರದಿ ಸಲ್ಲಿಸಿದ ನಂತರ ಪ್ರಕರಣದ ಬಗ್ಗೆ ಎಸ್ ಎಫ್ ಐ ಓ ಮತ್ತು ಆರ್ ಬಿ ಐ ರವರಿಗೆ ಮಾಹಿತಿ ನೀಡಿಲ್ಲ. 30.09.2010 ರಂದು 1 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆ ಗೆ ಹಿರಿಯ ವ್ಯವಸ್ತಾಪಕನಾಗಿ ನೇಮಕಗೊಂಡಿದ್ದು ಎಂಬ ಬಗ್ಗೆ ದಾಖಲೆ ಇದೆ. ದಾಖಲೆ ಎಂದರೆ ಸಾಕ್ಷಿ ಅಪಾಯಿಂಟ್ ಮೆಂಟ್ ಲೆಟರ್ ಮತ್ತು ಗುರುತಿನ ಚೀಟಿ ಮತ್ತು ರೆಫೆರನ್ಸ ನಂ.1383340837 , ಅರ್ಜಿದಾರನ ಗುರುತು ಸಂಖ್ಯೆ 2147625961 ಎಂದು ಕಾಣಿಸಿದೆ. ಸದರಿ ದಾಖಲೆ ಗುರುತಿಸಿಲ್ಲ ಕಾರಣ ಅಂತಹ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅಂತಿಮ ವರದಿ ಜೊತೆ ಲಗತ್ತಿಸಿದ್ದೇನೆ ಎಂದು ನುಡಿಯುತ್ತಾರೆ. ಅಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ ಮತ್ತು 1 ನೇ ಆರೋಪಿಗೆ ಸಹ ನೀಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

13. ಪ್ರಕರಣಕ್ಕೆ ಸಂಬಂದಿಸಿದಂತೆ ಬ್ಯಾಂಕ್ ನವರು ಆರ್ ಬಿ ಐ ಗೆ ಮಾಹಿತಿ ನೀಡಿದ್ದರಾ ಇಲ್ಲವಾ ಎನ್ನುವ ಬಗ್ಗೆ ನನ್ನ ತನಿಖಾ ಕಾಲದಲ್ಲಿ ವಿಚಾರಣೆ ಮಾಡಿಲ್ಲ ಆದರೆ ಮಾಹಿತಿ ನೀಡಿದ್ದೇನೆ. ಎಸ್ ಎಫ್ ಐ ಓ ಹಿರಿಯ ಅದಿಕಾರಿ ಅಂತಿಮ ವರದಿ ಸಲ್ಲಿಸಿದ ನಂತರ ನನ್ನನ್ನು ಬೇಟಿ ಆಗಿಲ್ಲ. ಅಂತಿಮ ವರದಿಯಲ್ಲಿ ಕಾಣಿಸಿರುವ ಪೇಕ್ ಖಾತೆಗಳ ಬಗ್ಗೆ ನಾನು ವಿಚಾರಣೆ ಮಾಡಿದ್ದೀರಾ ಸಾಕ್ಷಿ ಆ ಬಗ್ಗೆ ವಿಚಾರಣೆ ಮಾಡಿ ಆಡಿಟ್ ರಿಪೋರ್ಟ ಸಹ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಆಡಿಟ್ ಸರ್ಟಿಸಿಕೇಟ್ ಎಂದು ಮರುನುಡಿಯುತ್ತಾರೆ. ಆಡಿಟ್ ಸರ್ಟಿಫಿಕೇಟ್ ದಿನಾಂಕ ನೆನಪಿಲ್ಲ ಆದರೆ ಅಂತಿಮ ವರದಿ ಜೊತೆ ಸಲ್ಲಿಸಿದ್ದೇನೆ. ಆ ಬಗ್ಗೆ ಆಡಿಟ್ ಅಪ್ರೈಸರ್ ವರದಿಯಲ್ಲಿ ಕಾಣಿಸಿದೆ ಎಂದು ನುಡಿಯತ್ತಾರೆ.

14. ಸದರಿ ಆಡಿಟ್ ಅಪ್ರೈಸರ್ ವರದಿ ದಿಃ07.02.2012 ರಿಂದ 08.12.2012 ರವರೆಗೆ ಆಡಿಟ್ ಮಾಡಿದ ಬಗ್ಗೆ ಕಾಣಿಸಿದೆ ಎಂದು ಉತ್ತರಿಸುತ್ತಾರೆ. ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಅಪ್ರೈಸರ್ ಆಡಿಟ್ ವರದಿ ಹೊರತುಪಡಿಸಿ ಬೇರೆ ಆಡಿಟ್ ವರದಿ ಪಡೆದಿದ್ದೆನಾ ಇಲ್ಲವಾ ಎಂದರೆ ಇಲ್ಲ. ದಿಃ07.02.2012 - 08.12.2012 ಅಪ್ರೈಸರ್ ಆಡಿಟ್ ವರದಿ ಯ ಸಂಪೂರ್ಣ ಆದಾರದ ಮೇಲೆ ಅಂತಿಮ ವರದಿ ಸಲ್ಲಿಸಿದ್ದ ಎಂದರೆ ಸರಿಯಲ್ಲ. 07.02.2012 ರ ನಂತರ ಅಂತಿಮ ವರದಿಯಲ್ಲಿ ಕಾಣಿಸಿರುವಂತೆ ಬ್ಯಾಂಕ್ ನ ಯಾವುದಾದರೂ ಆಂತರಿಕ ವಿಚಾರಣೆ , ಯಾವುದಾದರೂ ಆಡಿಟ್ ವರದಿ ತನಿಖಾ ಕಾಲದಲ್ಲಿ ಪಡೆದಿದ್ದೀರಾ ಎಂದರೆ ಚೆಕ್ ಲಿಸ್ಟ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

15. ಎನ್ ಡಿಸಿ ಚೆಕ್ ಲಿಸ್ಟ ಬಗ್ಗೆ ಮಾಹಿತಿ ಇದೆಯಾ ಎಂದರೆ ನನ್ನ ತನಿಖೆಗೆ ಬೇಕಾದ ಸಂಗತಿಗಳ ಬಗ್ಗೆ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ ಒಟ್ಟು 52 ಕ್ರಮ ಸಂಖ್ಯೆಗಳಿದ್ದು ಕೆಲವು ಮಾಹಿತಿ ಇದೆ ಕೆಲವು ಸಂಬಂದಿಸಿಲ್ಲ ಎಂದು ನುಡಿಯತ್ತಾರೆ. ಎನ್ ಡಿ ಸಿ ಚೆಕ್ ಲಿಸ್ಟ ನ ಡಿ ಯಾವ ಯಾವ ಮಾಹಿತಿಗಳನ್ನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಪಡೆದಿದ್ದೇನೆ ಎಂದರೆ ಸಾಕ್ಷಿ ಅರ್ಜಿ , ಅಕ್ಕಸಾಲಿಗನ ವರದಿ, ಡಿಕ್ಲೆರೇಶನ್ ವ್ಯವಸಾಯಕ್ಕೆ ಸಂಬಂದಿಸಿದಂತೆ ಹಣ ಪಡೆದ ಬಗ್ಗೆ ಮತ್ತು ಇತರೆ. ಸಿಪಿಸಿಎಸ್ ರಿಪೊರ್ಟ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಬ್ಯಾಂಕ್ ನವರು ಸಲ್ಲಿಸಿದ ದಾಖಲೆಗಳನ್ನು ನಾನು ಸರಿಯಾದ ರೀತಿಯಲ್ಲಿ ಪರಿಶೀಲನೆ ನಡೆಸಿಲ್ಲ ಎಂದರೆ ಸರಿಯಲ್ಲ.

2 ಮತ್ತು 4 ನೇ ಆರೋಪಿಗಳ ಪರ ಶ್ರೀ ಡಿ ಎಂ ಬಿ ವಕೀಲರಿಂದ ಃ-

16. ಅಂತಿಮ ವರದಿ ಕಾಲಂ ನಂ.7 ಪುಟ 2 ರಲ್ಲಿ 2 ನೇ ಆರೋಪಿ ಸದರಿ ಕಾಲಂ ನಲ್ಲಿ ಕಾಣಿಸಿರುವಂತೆ ಕಾರ್ಯ ನಿರ್ವಹಿಸಬೇಕಾಗಿತ್ತು ಎಂದು ಕಾಣಿಸಿದ್ದೇನೆ ಆದರೆ ನಿರ್ವಹಿಸಿದ್ದರ ಬಗ್ಗೆ ಕಾಣಿಸಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿ ಬ್ಯಾಂಕ್ ನಲ್ಲಿ ಪೀಲ್ಡ ಆಪೀಸರ್ ಆಗಿ ಕಾರ್ಯನಿರ್ವಹಿಸುತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ

ಶಾಖಾದಿಕಾರಿ ಎಂದು ನುಡಿಯುತ್ತಾರೆ. 2 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಆಪರೇಶನ್ ಮ್ಯಾನೇಜರ್ ಆಗಿ ಮತ್ತು 4 ನೇ ಆರೋಪಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತಿದ್ದರು ನನ್ನ ತನಿಖಾ ಕಾಲದಲ್ಲಿ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ದಾಖಲೆ ಪಡೆದುಕೊಂಡಿದ್ದೆ. 2 ಮತ್ತು 4 ನೇ ಆರೋಪಿಗಳಿಗೆ ಸಂಬಂದಿಸಿದಂತೆ ನೇಮಕಾತಿ ಆದೇಶದಲ್ಲಿ ಸದರಿಯವರುಗಳನ್ನು ಆಪರೇಶನ್ ಮ್ಯಾನೇಜರ್ ಮತ್ತು ಮ್ಯಾನೇಜರ್ ಆಗಿ ನೇಮಿಸಿದ ಬಗ್ಗೆ ಕಾಣಿಸಿದ್ದು ಆ ಬಗ್ಗೆ ಮಾಹಿತಿ ಪಡೆದಿದ್ದೀರಾ ಎಂದರೆ ಸಾಕ್ಷಿ ದಾಖಲೆ ಪಡೆದು ಹಾಜರುಡಿಸಿದ್ದೇನೆ ಎಂದು ನುಡಿಯತ್ತಾರೆ.

17. ಸದರಿ ದಾಖಲೆಯಲ್ಲಿ 4 ನೇ ಆರೋಪಿ ಅಸಿಸ್ಟೆಂಟ್ ಮ್ಯಾನೇಜರ್ ಎಂದು ಕಾಣಿಸಿದೆ 2 ನೇ ಆರೋಪಿ ಬಗ್ಗೆ ದಾಖಲೆಯಲ್ಲಿ ಕಾಣಿಸಿಲ್ಲ ಆದರೆ ರೆಪೆರೆನ್ಸ ಸಂಖ್ಯೆ ಕಾಣಿಸಿದೆ ಎಂದು ನುಡಿಯುತ್ತಾರೆ.2 ನೇ ಆರುೀಪಿ ಐಸಿಐಸಿಐ ಚಿತ್ರದುರ್ಗ ಶಾಖೆ ಯಲ್ಲಿ ಆಪರೇಶನ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತಿದ್ದಾರಾ ಇಲ್ಲವಾ ಎಂಬ ಬಗ್ಗೆ ತನಿಖಾ ಕಾಲದಲ್ಲಿ ದಾಖಲೆ ಪಡೆದುಕೊಂಡಿದ್ದೇನೆ . ದಾಖಲೆ ಎಂದರೆ ಅಪಾಯಿಂಟ್ ಮೆಂಟ್ ಆರ್ಡರ್. ಅಂತಿಮ ವರದಿ ಪುಟ ಸಂಖ್ಯೆ 2 , 4 ನೇ ಪ್ಯಾರಾದಲ್ಲಿ 4 ನೇ ಆರೋಪಿ ಮ್ಯಾನೇಜರ್ ಎಂದು ಕಾಣಿಸಿದೆ ಎಂದರೆ ಸರಿ ಕಣ್ತಪ್ಪಿನಿಂದ ನಮೂದಿಸಿರಬಹುದು ಎಂದು ನುಡಿಯುತ್ತಾರೆ.

18. ಈ ಹಂತದಲ್ಲಿ ಸಾಕ್ಷಿಗೆ ರಣಜಿತ್ ಕುಮಾರ್ ಗುಪ್ತ ರವರು ಈ ರೀತಿ ಹೇಳಿಕೆ ನೀಡಿರುತ್ತಾರೆ ಎಂದು ಪ್ರಶ್ನೆ ಎತ್ತಿದ್ದು ನ್ಯಾಯಾಲಯ ಮದ್ಯ ಪ್ರವೇಶಿಸಿ ಸಾಕ್ಷಿ ಆ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ನುಡಿದಿಲ್ಲ ಬದಲಿಗೆ ಚಾಸಾ.37 ತನಿಖೆ ಪೂರೈಸಿದ್ದು ಪರಿಶೀಲಿಸಿ ಅಂತಿಮ ವರದಿ ಸಲ್ಲಿಸಿರುವುದಾಗಿ ಮಾತ್ರ ನುಡಿದಿದ್ದು ಈ ಪ್ರಶ್ನೆ ಅಸಮಂಜಸ ಎಂದು ತಳ್ಳಿಹಾಕಲಾಗಿದೆ. ದಿ:04.01.2011 ರಂದು 1 ನೇ ಆರೋಪಿ ಬ್ಯಾಂಕ್ ಗೆ ರಾಜೀನಾಮೆ ನೀಡಿದ್ದು ಅಂದಿನಿಂದ ಅಖಿಲೇಶ್ ರವರು ಕೀ ಕಸ್ಟೊಡಿಯನ್ ಆಗಿ ಕಾರ್ಯನಿರ್ವಹಿಸುತಿದ್ದ ಬಗ್ಗೆ ತನಿಖಾ ಕಾಲದಲ್ಲಿ ತನಿಖೆ ಮಾಡಿಲ್ಲ ಕಾರಣ ಚಾಸಾ.37 ತನಿಖೆ ಮಾಡಿರುತ್ತಾರೆ . ಹುಬ್ಬಳ್ಳಿ ಶಾಖೆಯಿಂದ ಚಿತ್ರದುರ್ಗ ಶಾಖೆಗೆ

2 ನೇ ಆರೋಪಿ ಯಾವಾಗ ವರ್ಗಾವಣೆ ಆಗಿದ್ದು ನನಗೆ ಈಗ ನೆನಪಿಲ್ಲ.

19. 2 ನೇ ಆರೋಪಿ ಯಾವ ಯಾವ ಗ್ರಾಹಕರಿಂದ ಖಾತೆಗೆ ಸಂಬಂದಿಸಿದಂತೆ ಮಾಹಿತಿ ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ನನಗೆ ಈಗ ಹೇಳಲು ನೆನಪಿಲ್ಲ ಅಂತಿಮ ವರದಿಯಲ್ಲಿ ಕಾಣಿಸಿದ್ದೇನೆ. 4 ನೇ ಆರೋಪಿ ಸಾಲ ಮಂಜೂರು ಮತ್ತು ದಾಖಲೆ ಆಡಿಟ್ ಗೆ ಸಂಬಂದಿಸಿದಂತೆ ಪಡೆದ ಬಗ್ಗೆ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಪರಿಶೀಲನೆ ಮಾಡಿದ್ದೆ. ಅಂತಿಮ ವರದಿಯಲ್ಲಿ 2 ಮತ್ತು 4 ನೇ ಆರೋಪಿಗಳ ವಿರುದ್ದ ಕಾಣಿಸಿರುವ ಸಂಗತಿಗಳು ಸುಳ್ಳು ಆ ಬಗ್ಗೆ ತನಿಖಾ ಕಾಲದಲ್ಲಿ ತಿಳಿದಿದ್ದು ಆರೋಪಿಗಳ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 3 ಮತ್ತು 7 ನೇ ಆರೋಪಿಗಳ ಪರ ವಕೀಲರಿಂದ</u>

20. ಅಂತಿಮ ವರದಿ ಸಲ್ಲಿಸಬೇಕಾದಲ್ಲಿ ಸಲ್ಲಿಸುವ ಪೂರ್ವದಲ್ಲಿ ದೂರಿನಿಂದ ಅಂತಿಮ ವರದಿ ಸಲ್ಲಿಸುವ ವರದಿ ಸಲ್ಲಿಸುವವರೆಗೂ ನಡದಿರುವ ಎಲ್ಲ ಸಂಗತಿಗಳನ್ನು ದಾಖಲೆಗಳನ್ನು ಪರಿಶೀಲಿಸಿ ತನಿಖಾದಿಕಾರಿ ತೃಪ್ತಿಯಾದ ನಂತರವೇ ಅಂತಿಮ ವರದಿ ಸಲ್ಲಿಸುವ ಕ್ರಮ ಎಂದರೆ ಸರಿ. ಚಾಸಾ.37 ರವರಿಂದ ಮುಂದಿನ ತನಿಖೆಗೆ ಕಡತವನ್ನು ಪಡೆದ ನಂತರ ನಾನು ಸ್ತಳಕ್ಕೆ ಬೇಟಿ ನೀಡಿಲ್ಲ ಚಾಸಾ.37 ಪೂರೈಸಿದ್ದು ಅಂತಿಮ ವರದಿ ಚಾಸಾ.37 ಸಲ್ಲಿಸಿದ್ದ ಕಡತವನ್ನು ಪರಿಶೀಲಿಸಿ ಸಲ್ಲಿಸಿದ್ದೇನೆ. ಸಾಮಾನ್ಯವಾಗಿ ಯಾವುದೇ ಬ್ಯಾಂಕ್ ಗೆ ವಂಚಿಸಿದ ಪ್ರಕರಣಗಳು ಕಂಡುಬಂದಲ್ಲಿ ಆ ಬಗ್ಗೆ ದೂರು ದಾಖಲಾದ ತಕ್ಷಣ ಘಟನಾ ಸ್ತಳಕ್ಕೆ ಬೇಟಿ ನೀಡಿ ಸ್ತಳ ಅಜಮಾಯಿಶಿ ಮಾಡುವ ಕ್ರಮ ಎಂದರೆ ಸರಿ. ಅಂತಹ ಸ್ತಳ ಅಜಮಾಯಿಶಿ ಮಾಡಿದ ನಂತರ ಬ್ಯಾಂಕ್ ನಲ್ಲಿ ಇತರೆ ವ್ಯವಹಾರ ನಡೆಯವುದಿಲ್ಲ ಎಂದರೆ ಆ ರೀತಿ ಇಲ್ಲ. ಬ್ಯಾಂಕ್ ನಲ್ಲಿ ಸಿಸಿ ಟಿವಿ ಪುಟೇಜ್ ಪಡೆದುಕೊಳ್ಳಬೇಕಾ ಇಲಲವಾ ಎಂಬ ಬಗ್ಗೆ ನನಗೆ ನನ್ನ ತನಿಖಾ ಕಾಲದಲ್ಲಿ ಅನ್ನಿಸಲಿಲ್ಲ ಕಾರಣ ಚಾಸಾ.37 ತನಿಖೆ ಪೂರೈಸಿದ್ದರು ಇತರೆ ತನಿಖಾದಿಕಾರಿಗಳು ಮಾಡಿದ್ದರಾ ಇಲ್ಲವಾ ಎಂಬ ಬಗ್ಗೆ ನನಗೆ ನೆನಪಿಲ್ಲ ದಾಖಲೆ ಹಾಜರುಪಡಿಸಿದ್ದೇನೆ. ಚಾಸಾ.37 ರವರಿಗೆ ವರ್ಗಾವಣೆ ಆಗಿರಬಹುದು ನೆನಪಿಲ್ಲ ಕಡತ ನಾನು ಅವರಿಂದ ಪಡೆದಿದ್ದೆ.

21. ಕಡತ ಪಡೆದ ನಂತರ ದೂರನ್ನು ಪರಿಶೀಲಿಸಿದ್ದೇನೆ. ದೂರಿನಲ್ಲಿ ಕೀ ಮೂಮೆಂಟ್ ರಿಜಿಸ್ಟರ್ ಬಗ್ಗೆ ಕಾಣಿಸಿದೆ ಎಂದರೆ ಸರಿ. ನನ್ನ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ದೂರಿನಲ್ಲಿ ಕಾಣಿಸಿರುವ ಸದರಿ ಕೀ ಗಳನ್ನು ನಾನು ಅಮಾನತ್ ಪಡಿಸಿಕೊಂಡಿಲ್ಲ. ಅಂತಿಮ ವರದಿಯಲ್ಲಿ ಇತರೆ ಸಾಕ್ಷಿದಾರರುಗಳಿಗೆ ಕರೆಸಿ ವಿಚಾರಣೆ ಮಾಡುವ ಅಗತ್ಯತೆ ನನಗೆ ಕಾಣಿಸಿರಲಿಲ್ಲ ಕಾರಣ ಪೂರ್ವಾದಿಕಾರಿ ಮಾಡಿದ್ದು. ದೂರಿಗೆ ಪೂರಕವಾಗಿ ನಾನು ಯಾವುದೇ ಯಾವ ಯಾವ ಖಾತೆದಾರರು ಮರಣಹೊಂದಿದ್ದಾರೆ ಎಂಬ ಬಗ್ಗೆ ದಾಖಲೆ ಪಡೆದಿಲ್ಲ. ಪಿರ್ಯಾದಿ ಐಸಿಐಸಿಐ ಬ್ಯಾಂಕ್ ನ ಕ್ಲಸ್ಟರ್ ಮ್ಯಾನೇಜರ್ ಎಂದು ದೂರಿನಲ್ಲಿ ಕಾಣಿಸಿದ್ದು ಆ ಬಗ್ಗೆ ದಾಖಲೆ ಪಡೆದಿದ್ದೀರಾ ಎಂದರೆ ನಾನೇನು ಪಡೆದಿಲ್ಲ.

22. ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಕ್ಲಸ್ಟರ್ ವ್ಯಾಪ್ತಿಯಲ್ಲಿ ಬರುತ್ತದೆ ಎಂಬ ಬಗ್ಗೆ ದಾಖಲೆ ನಾನು ಪಡೆದಿಲ್ಲ. 3 ಮತ್ತು 7 ನೇ ಆರೋಪಿಗಳಿಗೂ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಗೆ ಯಾವುದೇ ಸಂಬಂದ ಇಲ್ಲ ಎಂದು ಗೊತ್ತಿದು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 5 ನೇ ಆರೋಪಿ ಪರ ವಕೀಲರಿಂದ

23. ದೂರಿನ ಪುಟ 3 ರಲ್ಲಿ ಕಾಣಿಸಿರುವ ಸಂಗತಿ ಸರಿಯಿರುತ್ತದೆ. ಯಾವುದಾದರೂ ದೂರಿಗೆ ವಿರುದ್ದವಾಗಿ ಡಿಸ್ ಕ್ರಿಪೆನ್ಸಿಸ್ ಇದ್ದಲ್ಲಿ 26.12./27.12.2011 ರ ನಂತರಕ್ಕೆ ಸಂಬಂದಿಸಿದ್ದು ಎಂದರೆ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಅಂತಿಮ ವರದಿಯ ಕಾಲಂ ನಂ.7 ರಲ್ಲಿ 5 ನೇ ಆರೋಪಿ ಪರ ಕಾಣಿಸಿರುವ ಸಂಗತಿಗಳಿಗೆ ಪೂರಕವಾಗಿ ಅಂದರೆ 12.10.2011 ರಿಂದ 15.02.2012 ವರೆಗೆ ಬ್ರಾಂಚ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತಿದ್ದರು ಎಂಬ ಬಗ್ಗೆ ಮತ್ತು 5 ನೇ ಆರೋಪಿಯ ಕಾರ್ಯವೈಖರಿ ಬಗ್ಗೆ ಯಾವ ಯಾವ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ ಎಂದರೆ ಸಾಕ್ಷಿ ಅಪಾಯಿಂಟ್ ಆರ್ಡರ್ ಪಡೆಯಲಾಗಿದೆ ಎಂದು

ನುಡಿಯುತ್ತಾರೆ.

24. ದಿ:01.01.2010 ರಿಂದ ದಿ:14.11.2011 ರವರೆಗೆ ಮಾತ್ರ 5 ನೇ ಆರೋಪಿ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಯಲ್ಲಿ ಕಾರ್ಯನಿರ್ವಹಿಸಿದ್ದು ಆ ಬಗ್ಗೆ ಸರಿಯಾದ ದಾಖಲೆಗಳನ್ನು ಪಡೆದು ಪರಿಶೀಲಿಸದೇ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.25 ಆಡಿಟಿ ಗೆ ಬಂದಾಗ ಜುಯಲ್ ಖಾತೆಗೆ ಸಂಬಂದಿಸಿದಂತೆ ಮಾಹಿತಿ ತಿಳಿದಿದ್ದು ಎಂದು ಹೇಳಿಕೆಯಲ್ಲಿ ನುಡಿದಿದ್ದಾರೆ ಎಂದರೆ ಸರಿ. ದಿ:14.11.2011 ರಂದು 5 ನೇ ಆರೋಪಿ ಬ್ಯಾಂಕ್ ನ ಕರ್ತವ್ಯಕ್ಕೆ ರಾಜಿನಾಮೆ ನೀಡಿರುತ್ತಾರೆ ಆ ಬಗ್ಗೆ ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಪರಿಶೀಲನೆ ಮಾಡಿಲ್ಲ.

25. ದಿ:14.11.2011 ರಂದು 5 ನೇ ಆರೋಪಿ ರಾಜೀನಾಮೆ ನೀಡಿ ಪದಮುಕ್ತ ಗೊಂಡ ನಂತರ ಸದರಿ ದಿನಾಂಕದವರಗೂ ಸದರಿ ವಂಚನೆ ಬಂಗಾರದ ಖಾತೆಗಳಿಗೆ ಸಂಬಂದಿಸಿದಂತೆ ನಡೆದಿರಲಿಲ್ಲ ಸರಿಯಾಗಿ ಇದ್ದು ಆ ಬಗ್ಗೆ ನಾನು ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ನಾನು ಸರಿಯಾಗಿ ಪರಿಶೀಲನೆ ನಡೆಸಿಲ್ಲ ಎಂದರೆ ಸರಿಯಲ್ಲ. ದಿ:20.09.2011 ಮತ್ತು ದಿ:17.11.2011 ರಂದು ನನ್ನ ಅಂತಿಮ ವರದಿ ಕಾಲಂ ನಂ.7 ರಲ್ಲಿ ಕಾಣಿಸಿರುವಂತೆ ನಟರಾಜನ್ ಸದರಿ ಬ್ಯಾಂಕ್ ನಲ್ಲಿ ಖಾತೆದಾರನಾಗಿದ್ದು ಖಾತಾ ನಂ.142405000620 ದಂತೆ ಖಾತೆ ಸಹ ಹೊಂದಿದ್ದು ಸದರಿ ಎರಡು ಖಾತೆಗಳಿಗೆ ಸಂಬಂದಿಸಿದಂತೆ ಆತ 1,92,000/- ಮತ್ತು 4,00,000/- ಬಂಗಾರದ ಸಾಲ ಸಹ ಪಡೆದಿದ್ದು ಆ ಸಂಬಂದ ಗ್ರಾಹಕ ವೇದಿಕೆಗೆ ದೂರು ಸಲ್ಲಿಸಿ ದೂರು ದಾಖಲು ಮಾಡಿದ್ದು ಆ ಬಗ್ಗೆ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ಕೂಲಂಕುಶವಾಗಿ ಪರಿಶೀಲನೆ ಮಾಡದೇ ಪೇಕ್ ಅಕೌಂಟ್ ಎಂದು ಕಾಣಿಸಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 5 ನೇ ಆರೋಪಿಯಿಂದ ದಾಖಲೆಗಳನ್ನು ಮತ್ತು ವಂಚಿಸಿದ ಬಗ್ಗೆ ಮಾಲನ್ನು ಅಮಾನತ್ ಪಡಿಸಿಕೊಂಡು ಬಗ್ಗೆ ನನ್ನ ತನಿಖಾ ಕಾಲದಲ್ಲಿ ಮಾಹಿತಿ ಪಡೆದಿಲ್ಲ ಎಂದರೆ ಸರಿಯಲ್ಲ.

26. ಚಾಸಾ.37 ರವರಿಂದ ಕಡತ ಪಡೆದ ನಂತರ ಅದಕ್ಕೆ ಪೂರಕವಾಗಿ ಬ್ಯಾಂಕ್ ಗೆ ಬೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂಬ ಬಗ್ಗೆ ಅನ್ನಿಸಲಿಲ್ಲವಾ ಎಂದರೆ ಸಾಕ್ಷಿ ಚಾಸಾ.37 ಆ ಬಗ್ಗೆ ಪರಿಶೀಲಸಿದ್ದು ಸರಿಯಿದ್ದು ಕಾರಣ ನನಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕ್ ನಲ್ಲಿ 4 ದಿಕ್ಕುಗಳಿಗೂ ಸಿಸಿ ಕ್ಯಾಮೆರಾ ಇದೆ ಎಂದರೆ ಇರಬಹುದು. ಸಾಮಾನ್ಯವಾಗಿ 6 ತಿಂಗಳ ವರೆಗೆ ಸಿಸಿ ಕ್ಯಾಮೆರಾ ಫುಟೇಜ್ ಇರುತ್ತದೆ ಎಂದರೆ ಇರಬಹುದು. ಉದ್ದೇಶವಪೂರ್ವಕವಾಗಿ ನಾನು ಸಿಸಿ ಟಿವಿ ಫುಟೇಜ್ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಿಸಿ ಟಿವಿ ಅಳವಡಿಸಿದ್ದಲ್ಲಿ ಎಲ್ಲ ವ್ಯವಹಾರ ಸಿಸಿ ಟಿವಿಯಲ್ಲಿ ರೆಕಾರ್ಡ ಆಗುತ್ತದೆ ಎಂದರೆ ಸರಿ.

27. ಅಂತಿಮ ವರದಿಯ ಪುಟ 12 ರಲ್ಲಿ 5 ನೇ ಆರೋಪಿ ಸುನಿಲ್ ಎಂಬ ಖಾತೆದಾರನಿಗೆ ಸಂಬಂದಿಸಿದ ಸಹಿ ಪೋರ್ಜರಿ ಮಾಡಿದ್ದು ಅಲ್ಲದೇ ವೋಚರ್ ಸಹ 5 ನೇ ಆರೋಪಿ ಮಾಡಿ ಖಾತೆ ಯಿಂದ ಹಣ ಪಡೆದಿದ್ದಾರೆ ಎಂಬ ಬಗ್ಗೆ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ದಾಖಲೆಗಳನ್ನು ಪಡೆದುಕೊಂಡಿದ್ದೀರಾ, ಸಾಕ್ಷಿದಾರರುಗಳನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ಅಂತಿಮ ವರದಿ ಕಲಂ 7 ರಲ್ಲಿ ಕಾಣಿಸಿರುವ ಸುನಿಲ್ ವಿವರಣೆಗಳನ್ನು ನಾನು ಪ್ರತ್ಯೇಕವಾಗಿ ತನಿಖೆ ಮಾಡಿಲ್ಲ. ಅಂತಿಮ ವರದಿಯ ಪುಟ 16 ರಲ್ಲಿ ಕ್ಯೂ ಡಿ 294 , 296, 154, 156 ರಂತೆ ಅತರೈಜಡ್ ಸಿಗ್ನೆಟರಿ ಆಗಿ 5 ನೇ ಆರೊಪಿಗಳನ್ನು ಸಹಿಗಳನ್ನು ಪೋರ್ಜರಿ ಮಾಡಿದ್ದಾರೆ ಎಂದು ಕಾಣಿಸಿದ್ದು ಯಾವ ದಿನಾಂಕ ಮತ್ತು ಯಾರಿಗೆ ಸಂಬಂದಿಸಿದ್ದು ಎಂದು ನನ್ನ ತನಿಖಾ ಕಾಲದಲ್ಲಿ ವಿಚಾರಣೆ ಮಾಡಿಲ್ಲ ಹೇಳಿಕೆಗಳನ್ನು ಪಡೆದಿಲ್ಲ.

28. ದಿ:14.11.2011 ರ ಕಾಲಕ್ಕೆ 5 ನೇ ಆರೋಪಿ ರಾಜೀನಾಮೆ ನೀಡಿ ಬ್ಯಾಂಕಿ ನಿಂದ ಪದಮುಕ್ತಗೊಳ್ಳುವ ಕಾಲಕ್ಕೆ 34 ಬಂಗಾರದ ಖಾತೆ ಸರಿಯಾಗಿ ಇದ್ದು ಪರಿಶೀಲಿಸಿ ಆತನನ್ನು ಪದಮುಕ್ತ ಗೊಳಿಸಿ ಬಿಡುಗಡೆ ಮಾಡಿದ್ದು ಎಂದರೆ ಇರಬಹುದು. ಈ ಪ್ರಕರಣಕ್ಕೂ 5 ನೇ ಆರೊಪಿಗೂ ಯಾವುದೇ ಸಂಬಂದ ಇಲ್ಲ ಎಂಬ ಬಗ್ಗೆ ನನ್ನ ತನಿಖಾ ಕಾಲದಲ್ಲಿ ತಿಳಿದಿದ್ದು ನನ್ನ ಪೂರ್ವ ತನಿಖಾದಿಕಾರಿಗಳು ಸಲ್ಲಿಸಿದ್ದ ತನಿಖೆಗೆ

PW_13

ಪರಿಶೀಲಿಸದೇ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು
ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ